

ಮೋಡ– ಮೌನ, ಬಿಸಿಲು –ನೆರಳು, ನೀರು– ಪರ್ವತ ಶ್ರೇಣಿ ... ಎಲ್ಲದರ ನಡುವಿನ ಜುಗಲ್‌ಬಂದಿಗೆ ಮೈಯೊಡ್ಡಿ ಕ್ಷಣ ಕ್ಷಣಕ್ಕೂ ಭಿನ್ನ ರೂಪದಲ್ಲಿ ದರ್ಶನ ದಯಪಾಲಿಸುವ ನದಿ, ಕಣಿವೆ, ಸರೋವರಗಳ ಸಾಲಿನಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲಬಹುದಾದ ತಾಣ ಚಂದ್ರತಾಲ್.

ಹಿಮಾಲಯ ಶ್ರೇಣಿಯ ಪರ್ವತಗಳಿಂದ ಹರಿಯುವ ತಣ್ಣನೆ ನೀರನ್ನು ಒಡಲಲ್ಲಿ ತುಂಬಿಕೊಂಡು ತನ್ನ ಪ್ರಶಾಂತತೆಯಿಂದಾಗಿಯೇ ಮೌನ ಮೋಹಿಗಳೊಂದಿಗೆ ಮಾತಿಗಿಳಿಯುವ ಸರೋವರ ಚಂದ್ರತಾಲ್. ಸಮುದ್ರ ಮಟ್ಟದಿಂದ ೪೩೦೦ ಮೀಟರ್ ಎತ್ತರದಲ್ಲಿರುವ ಈ ಸರೋವರದ ಬಳಿ ಜನಸಂದಣಿ ಕಾಣಸಿಗುವುದು ಅಪರೂಪ.

ಹಿಮಾಚಲ ಪ್ರದೇಶದ ವಿವಿಧೆಡೆಗಳಿಂದ ಹಮ್ಟಾ ಪಾಸ್‌ಗೆ ಚಾರಣ ಕೈಗೊಳ್ಳುವವರು ಸ್ಪಿಟಿ ವ್ಯಾಲಿಗೆ ಸೇರುವ ಚಂದ್ರತಾಲ್ ಸರೋವರದ ಬಳಿಯೇ ಹಾದು ಹೋಗುತ್ತಾರೆ. ಆ ಮೂಲಕ ಇಲ್ಲಿನ ಪ್ರಶಾಂತತೆಗೆ ಮೈಮನಸ್ಸು ಸೋಕಿಸಿ ಕೆಲ ಕಾಲ ವಿಶ್ರಮಿಸುತ್ತಾರೆ. ಇಲ್ಲಿಗೆ ಭೇಟಿ ನೀಡುವ ಬಹುತೇಕ ಪ್ರವಾಸಿಗರು, ಚಾರಣಿಗರೇ ಆಗಿರುತ್ತಾರೆ. ರಾತ್ರಿ ವೇಳೆ ಚಂದ್ರತಾಲ್ ಸಮೀಪವೇ ಬಿಡಾರ ಹೂಡುತ್ತಾರೆ.

ಮೇ ತಿಂಗಳಿನಿಂದ ಸೆಪ್ಟೆಂಬರ್ ವರೆಗೆ ಇಲ್ಲಿಗೆ ಭೇಟಿ ನೀಡಲು ಸೂಕ್ತ ಸಮಯವೆಂಬುದು ಚಾರಣ ಮಾರ್ಗದರ್ಶಿಗಳ ಅಭಿಮತ. ಮನಾಲಿಯಿಂದ ಚಂದ್ರತಾಲ್‌ಗೆ 140 ಕಿ.ಮೀ ದೂರವಿದೆ. ದುರ್ಗಮ ರಸ್ತೆ ಮಾರ್ಗದ ಆ ಮೂಲಕವೂ ಚಂದ್ರತಾಲ್ ತಲುಪಬಹುದು.

